ಕಾಲುಬಾಯಿ ರೋಗ

74(218); ಶ್ರೀ ಜಗದೀಶ್ ಕುಮಾರ್ ಆರ್., (ಹೆಬ್ಬಾಳ)

ಅ) ರಾಜ್ಯದಲ್ಲಿ ಕಾಲುಬಾಯಿ ರೋಗಕ್ಕೆ ತುತ್ತಾದ/ ಸಾವನ್ನಪ್ಪಿದ ಪ್ರಕರಣಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಕಾಲುಬಾಯಿ ರೋಗಕ್ಕೆ ತುತ್ತಾದ/ಸಾವನಪ್ಪಿದ ಪ್ರಕರಣಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿತರಿಸಿದ ಪರಿಹಾರವೆಷ್ಟು;

ಇ) ಕಾಲುಬಾಯಿ ರೋಗದ ಬಗ್ಗೆ ಅರಿವು ಮೂಡಿಸಲು ಸರ್ಕಾರವು ತೆಗೆದುಕೊಂಡಿರುವ ಕಾರ್ಯಕ್ರಮಗಳಾವವು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) 2013–14ರಲ್ಲಿ ರಾಜ್ಯದಲ್ಲಿ ಕಾಲು–ಬಾಯಿ ರೋಗದಿಂದ 14,441 ಜಾನುವಾರುಗಳು ಸಾವನ್ನಪ್ಪಿವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

2014–15ನೇ ಸಾಲಿನಲ್ಲಿ ಇಲ್ಲಿಯವರೆಗೂ ಯಾವುದೇ ಜಾನುವಾರುಗಳು ಮರಣ ಹೊಂದಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಆ) ರಾಜ್ಯದಲ್ಲಿ 2013–14 ರಲ್ಲಿ ಕಾಲು–ಬಾಯಿ ರೋಗದಿಂದ ಸಾವನ್ನಪ್ಪಿದ 14,436 ಜಾನುವಾರುಗಳಿಗೆ ₹ 23,73,90,100/– ಪರಿಹಾರ ವಿತರಿಸಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ರಾಜ್ಯದಲ್ಲಿ ಕಾಲು–ಬಾಯಿ ರೋಗದ ಬಗ್ಗೆ ಅರಿವು ಮೂಡಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.

ಲಸಿಕಾ ಕಾರ್ಯಕ್ರಮ ಹಾಗೂ ರೋಗದ ತಡೆಗಟ್ಟುವಿಕೆ ಬಗ್ಗೆ ವ್ಯಾಪಕವಾಗಿ ದೂರದರ್ಶನ, ಆಕಾಶವಾಣಿ, ದಿನಪತ್ರಿಕೆಗಳಲ್ಲಿ ಪ್ರಚಾರ ಮಾಡಲಾಗುತ್ತಿದೆ.

ಹೆಚ್ಚು ಜನಸಂದಣಿ ಸೇರುವ ಜಾಗಗಳಲ್ಲಿ ಈ ರೋಗದ ಬಗ್ಗೆ ಅರಿವು ಮೂಡಿಸುಲು ಬ್ಯಾನರ್‌ಗಳನ್ನು ಪ್ರದರ್ಶಿಸಲಾಗಿತ್ತು.

ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಈ ರೋಗದ ಬಗ್ಗೆ ಅರಿವು ಮೂಡಿಸುವ ಪೋಸ್ಟರ್ಸ್‌ಗಳನ್ನು ಅಂಟಿಸಿದ್ದು, ಕರಪತ್ರಗಳ ಮೂಲಕ ಸಹ ಪಶುಪಾಲಕರಲ್ಲಿ ಜಾಗೃತಿ ಮೂಡಿಸಲು ಕ್ರಮ ಜರುಗಿಸಲಾಗಿತ್ತು.

ಧ್ವನಿವರ್ಧಕಗಳ ಮೂಲಕ ಈ ರೋಗದ ಬಗ್ಗೆ ಅರಿವು ಮೂಡಿಸಲಾದೆ.

ಶ್ರೀ ಜಗದೀಶ್ ಕುಮಾರ್ ಆರ್. ಮಾನ್ಯ ಶಾಸಕರು, ಹೆಬ್ಬಾಳ ವಿಧಾನಸಭಾ ಕ್ಷೇತ್ರ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 218ಕ್ಕೆ ವಿವರಗಳು

ರಾಜ್ಯದಲ್ಲಿ ಕಾಲು ಬಾಯಿ ಜ್ವರ ರೋಗಕ್ಕೆ ಸಾವನ್ನಪ್ಪಿದ ಜಾನುವಾರುಗಳಿಗೆ ಪಾವತಿಸಿದ ಪರಿಹಾರದ ಕುರಿತು ಜಿಲ್ಲಾವಾರು ಮಾಹಿತಿ

ಕ್ರ ಸಂ	ಜಿಲ್ಲೆ	ಸಾವನಪ್ಪಿದ ಜಾನುವಾರುಗಳ ಸಂಖ್ಯೆ	ಕಾಲುಬಾಯಿ ರೋಗದಿಂದ ಸಾವನ್ನಪ್ಪಿದ ಜಾನುವಾರುಗಳಿಗೆ ವಿತರಿಸಿದ ಪರಿಹಾರದ ಮೊತ್ತ ರೂ.
1	ಬೆಂಗಳೂರು ನಗರ ಜಿಲ್ಲೆ	540	78,25,000
2	ಬೆಂಗಳೂರು ಗ್ರಾಮಾಂತರ	458	68,55,000
3	ಬಾಗಲಕೋಟೆ	56	9,55,300

4	ಬೆಳಗಾವಿ	377	76,67,000
5	ಬಳ್ಳಾರಿ	16	3,25,200
6	ಬೀದರ್	44	8,45,000
7	ವಿಜಾಪುರ	06	1,20,000
8	ಚಾಮರಾಜನಗರ	931	1,65,95,000
9	ಚಿಕ್ಕಮಗಳೂರು	105	18,70,000
10	ಚಿತ್ರದುರ್ಗ	41	7,85,000
11	ದಾವಣಗೆರೆ	47	9,70,000
12	ದಕ್ಷಿಣ ಕನ್ನಡ	06	1,15,000
13	ಚಿಕ್ಕಬಳ್ಳಾಪುರ	1268	2,47,98,000
14	ಧಾರವಾಡ	143	27,05,000
15	ಗದಗ	55	8,10,000
16	ಹಾಸನ	41	50,72,00
17	ಹಾವೇರಿ	152	22,53,500
18	ಕೊಡಗು	19	3,75,000
19	ಕೋಲಾರ	3082	5,32,85,000
20	ಕೊಪ್ಪಳ	126	20,29,000
21	ಮಂಡ್ಯ	3371	5,30,88,500
22	ಮೈಸೂರು	720	1,19,47,300
23	ರಾಮನಗರ	2042	2,50,14,800
24	ಶಿವಮೊಗ್ಗ	50	10,08,000
25	ತುಮಕೂರು	478	86,39,500
26	ಉಡುಪಿ	06	1,35,000
27	ಉತ್ತರ ಕನ್ನಡ	59	12,02,000
28	ರಾಯಚೂರು	04	1,00,000
ಒಟ್ಟು		**14436**	**23,73,90,100**